ಒದಗಿಸಲು ಏರ್ಪಾಡು ಮಾಡಿಕೊಳ್ಳಬಹುದಾಗಿತ್ತು. ಆದರೆ ಅವರು ಅದನ್ನು ಮಾಡಿಲ್ಲ. ಎರಡನೆಯದು ರೆಸಿಡೆನ್ಸಿಯಲ್ ಜೋನ್, ಬಿಸಿನೆಸ್ ಜೋನ್, ಇಂಡಸ್ಟ್ರಿಯಲ್ ಜೋನ್ ಎಂದು ಮೊದಲೇ ವ್ಯವಸ್ಥೆ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಪ್ರಾರಂಭದಲ್ಲೇ ಪೀಣ್ಯ ಪ್ರದೇಶದಲ್ಲಿ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದರೆ ಈ ಸಂಚಾರ ಸೌಕರ್ಯ ಸಮಸ್ಯೆ ಸಾಕಷ್ಟು ಕಡಿಮೆಯಾಗುತ್ತಿತ್ತು. ಈಗ ಪೀಕ್ ಅವರ್ಸ್‌ನಲ್ಲಿ ಸುಭಾಶ್‌ನಗರ ಬಸ್ಸು ನಿಲ್ದಾಣದಿಂದ ಹೊರಟು ಕೆಂಪೇಗೌಡ ರಸ್ತೆಯಿಂದ ಹಾದು ಹೋಗಬೇಕಾದರೆ ಹಿಂದೆ ಐದು ನಿಮಿಷ ಸಮಯ ತಗಲುತ್ತಿದ್ದುದು ಈಗ ಪೀಕ್ ಅವರ್ಸ್‌ನಲ್ಲಿ ೨೫ ನಿಮಿಷ ಬೇಕಾಗುತ್ತದೆ. ದ್ವಿಚಕ್ರ ವಾಹನಗಳು ಮತ್ತಿತರ ವಾಹನಗಳು ಅಧಿಕ ಸಂಖ್ಯೆಯಲ್ಲಿ ಓಡಾಡುವುದರಿಂದ ಬಸ್ಸುಗಳಿಗೆ ದಾರಿಮಾಡಿಕೊಂಡು ಹೋಗುವುದು ತುಂಬಾ ಪ್ರಯಾಸವಾಗುತ್ತದೆ. ಮುಂದೆ ಇದೇ ಪ್ರಮಾಣದಲ್ಲಿ ಬಸ್ಸುಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಾಕುತ್ತಾ ಹೋದರೆ ಎರಡು ಸಾವಿರ ಇಸವಿ ವೇಳೆಗೆ ಯಾವ ಬಸ್ಸನ್ನೂ ನಡೆಸುವುದಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಟ್ರಾನ್ಸ್‌ಪೋರ್ಟ್ ಸರ್ವಿಸ್ ಬಗ್ಗೆ ಸರ್ವೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸರ್ವೆ ಮಾಡಿದ ಆಧಾರದಮೇಲೆ ಅದನ್ನು ಪೂರೈಸಲು ನಮ್ಮ ರಾಜ್ಯದ ಆರ್ಥವ್ಯವಸ್ಥೆಯಲ್ಲೇ ಇದನ್ನು ಸುಧಾರಿಸಲು ಹೋಗುತ್ತೀರಾ ? ಅಥವಾ ವಿಶ್ವಬ್ಯಾಂಕ್‌ಗೆ ಈ ಪ್ರಾಜೆಕ್ಟ್ ವರದಿ ಕಳಿಸಿ ಇದನ್ನು ಕಾರ್ಯಗತ ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಮಂತ್ರಿಗಳು ತಮ್ಮ ಉತ್ತರವನ್ನು ಆದಷ್ಟು ಸಂಕ್ಷಿಪ್ತವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಪಿ. ರಾಮಮೂರ್ತಿ.—ಬಿ.ಟಿ.ಎಸ್. ವ್ಯವಸ್ಥೆ ಸಮರ್ಪಕವಾಗಿಲ್ಲ ಎಂದು ಎಲ್ಲರೂ ಒಪ್ಪುವ ತಕ್ಕಂಥ ಮಾತು. ಆದರೆಲ್ಲೂ ವಿದ್ಯಾರ್ಥಿಗಳಿಗೆ ಮತ್ತು ಬಸ್ಸು ಕಂಡಕ್ಟರುಗಳಿಗೆ ಆಗಾಗ್ಗೆ ಘರ್ಷಣೆ ಯಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೇ ಪ್ರತ್ಯೇಕವಾಗಿ, ಈಗ ವಿಧಾನಸೌಧಕ್ಕೆ ಕೆಲಸಕ್ಕೆ ಬರುವ ತಕ್ಕಂಥ ನೌಕರರಿಗೆ ಪ್ರತ್ಯೇಕ ಬಸ್ಸು ವ್ಯವಸ್ಥೆ ಮಾಡಿದ ಹಾಗೆ ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಹೋಗುವ ಸಮಯದಲ್ಲಿ ಬೇರೆ ಬಸ್‌ಗಳನ್ನು ಹಾಕುತ್ತೀರಾ ಸ್ವಾಮಿ ?

ಶ್ರೀ ಎಂ.ಪಿ. ಪ್ರಕಾಶ್ —ಈಗಾಗಲೇ ಹತ್ತು ಬಸ್ಸುಗಳನ್ನು ಟಾಟಾ ಕಂಪೆನಿಯವರಿಂದ ತಯಾರಿಸಿರುವ ತಕ್ಕಂತಾದ್ದನ್ನು ಉಪಯೋಗಿಸಲಾಗುತ್ತಿದೆ. ಒಂದೊಂದರಲ್ಲಿಯೂ ೧೧೦ ಜನರು ಕುಳಿತುಕೊಂಡು ಹೋಗಬಹುದು. ಅದಲ್ಲದೆ ೫೫ ಜನರು ಪ್ರಯಾಣ ಮಾಡಬಹುದಾದ ಒಂದು ವಾಹನ ಬಂದಿದೆ, ಈ ವಾಹನಗಳನ್ನು ವಿದ್ಯಾರ್ಥಿಗಳಿಗೆ ಉಪಯೋಗಿಸುವಂತೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇನೆ.

ಷಹಾಬಾದ್‌ನಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

೬೨. ಶ್ರೀ ಕೆ. ಬಿ. ಶಾನಪ್ಪ ಭಿಂಷ (ಷಹಬಾದ್).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಷಹಬಾದ್‌ನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಭೂ ಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಾದರೆ, ಯಾವಾಗ ಈ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಯಿತು ?

(ಇ) ಈ ಸ್ಥಳದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು ಯೋಜಿಸಲಾಗಿದೆಯೇ ? ಹಾಗಿದ್ದಲ್ಲಿ ಅದರ ವಿವರಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು).—

(ಅ) ಬಂದಿದೆ

(ಅ) ಚಿತ್ತಾಪುರದ ತಹಸೀಲ್ದಾರ್‌ರವರಿಂದ ತಾ. ೨೫-೧-೧೯೮೦ ರಂದು ಳಿಖಿ.೭೫೦ ಜದರ ಅಂ ಗಳಷ್ಟು ಪ್ರಮಾಣದ ನಿವೇಶನವನ್ನು ಸಂಸ್ಥೆಯು ವಶಕ್ಕೆ ತೆಗೆದುಕೊಳ್ಳಲಾಗಿದೆ.

(ಇ) ಇದೆ.

ಷಹಬಾದ್‌ನಲ್ಲಿ ನಿರ್ಮಿಸಲಾಗುವ ಬಸ್ ನಿಲ್ದಾಣದ ಅಂದಾಜು ವೆಚ್ಚ ೬ ಲಕ್ಷ ರೂ. ೧೯೮೩-೮೪ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಅಳವಡಿಸಲಾಗಿದೆ.

ಶ್ರೀ ಕೆ. ಬಿ. ಶಾನಪ್ಪ ಭಿಂಷ.— ಷಹಬಾದ್‌ನಲ್ಲಿ ಬಸ್ ನಿಲ್ದಾಣಕ್ಕೆ ೧೯೮೦ರಲ್ಲಿ ಜಾಗ ತೆಗೆದು ಕೊಂಡ ನಂತರ ಸುಮಾರು ಮೂರು ವರ್ಷಗಳವರೆಗೆ ಇದನ್ನು ಕಾರ್ಯಗತ ಮಾಡದಿರಲು ಕಾರಣ ಏನು ?

ಶ್ರೀ ಎಂ. ಪಿ. ಪ್ರಕಾಶ್.— ೧೯೮೩ರ ಆಯವ್ಯಯದಲ್ಲಿ ಇದನ್ನು ಸೇರಿಸಿರುವುದರಿಂದ ಈಗ ಅದು ಕಾರ್ಯಗತವಾಗುತ್ತದೆ.

ಶ್ರೀ ಕೆ. ಬಿ. ಶಾನಪ್ಪ ಭಿಂಷ.— ಹಿಂದೆ ಇದನ್ನು ಬಜೆಟ್‌ನಲ್ಲಿ ಸೇರಿಸಿರಲಿಲ್ಲವೇ ?

ಶ್ರೀ ಎಂ. ಪಿ. ಪ್ರಕಾಶ್.— ಇಲ್ಲ, ಸೇರಿಸಿರಲಿಲ್ಲ.

ಒಬ್ಬರು ಮಾನ್ಯ ಸದಸ್ಯರು.— ಸ್ವಾಮಿ, ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸ್ಸು ನಿಲ್ದಾಣ ನಿರ್ಮಿಸುವ ವಿಚಾರ ಏನಾಗಿದೆ ?

ಶ್ರೀ ಎಂ. ಪಿ. ಪ್ರಕಾಶ್.—ಇದು ಬೇರೆ ಪ್ರಶ್ನೆಯಾಗುತ್ತದೆ. ಈ ಬಗ್ಗೆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಭೂಸ್ವಾಧೀನಪಡಿಸಿಕೊಂಡು ಮೂರು ವರ್ಷ ಆಯಿತೆಂದು ಹೇಳಿದ್ದೀರಿ. ಜಮೀನು ಕಳೆದುಕೊಂಡವರಿಗೆ ಸರ್ಕಾರದವರು ಪರಿಹಾರ ಕೊಟ್ಟಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್.— ಪರಿಹಾರ ಕೊಟ್ಟಿದ್ದಾರೆ.

Strength of Agricultural Labourers in the State.

63. SRI P. RAMACHANDRA RAO (Ullal).— Will the Minister for Labour and Wakf. be pleased to state.—

(a) the number of Agricultural Labourers in the State,

(b) the number of days in a year they would get the work.

(c) the steps taken by the Government to privide them work throughout the year.

(d) when the rates of their wages would be revised.

(e) whether there is any proposal before the Government, to bring into force, the Agricultural Labourers Welfare Rules, on the pattern of Government of Kerala ?

SRI AZEEZ SAIT (Minister for Labour).—Sir, I beg to submit that the new question procedure has put us to lot of difficulty. The present question tabled by the hon. Member has been sent to my Secretariat at 5.00 p.m. yesterday. Since this question pertains to Agricultural Labourers in the State it is humanly impossible to collect the reply by to-day morning. Therefore, my submission is, if the hon.Member can satisfy with the replies to which I can answer to certain questions I am ready to reply. The answer is as follows.—